ರೈತರ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆಯು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿರುತ್ತದೆ. ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟು ಸ್ಥಾವರಗಳಿಗೆ ಅಳವಡಿಸಲು 52 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ಅಳವಡಿಸಲು ಅಗತ್ಯವಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರದ ಹೆಸರು	ಅಗತ್ಯವಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ
1	ಪಾಂಡಪುರ	10
2	ಕೆ.ಆರ್.ಪೇಟೆ	10
3	ನಾಗಮಂಗಲ	6
4	ಶ್ರೀರಂಗಪಟ್ಟಣ	7
5	ಮಂಡ್ಯ	2
6	ಕೆರಗೋಡು	2
7	ಮದ್ದೂರು	5
8	ಮಳವಳ್ಳಿ	6
9	ಕಿರುಗಾವಲು	4
	ಒಟ್ಟು	**52**

ಇ) ಮತ್ತು ಈ)

ಕುಡಿಯುವ ನೀರಿನ ಸ್ಥಾವರಗಳಿಗೆ ಹಾಗೂ ರೈತರ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವ ಪ್ರಕ್ರಿಯೆಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಸಂಪನ್ಮೂಲಗಳ ಲಭ್ಯತೆಗೆ ಒಳಪಟ್ಟು ನಿರಂತರವಾಗಿ ನಡೆಯುತ್ತಿದೆ. ನೀರಾವರಿ ಪಂಪುಸೆಟ್ಟುಗಳಿಗೆ ಬೇಕಾಗಿರುವ 52 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಂತಹಂತವಾಗಿ ಒದಗಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

4503 ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾರಂಭವಾಗಿರುವ ಒಟ್ಟು ಉದ್ಯಮ ಎಷ್ಟು;

ಆ) ಅದರಲ್ಲಿ ಭಾರಿ ಉದ್ಯಮ ಹಾಗೂ ಸಣ್ಣ ಕೈಗಾರಿಕೆಗಳೆಷ್ಟು;

ಇ) ಉದ್ಯಮಗಳಲ್ಲಿ ಹೂಡಲಾಗಿರುವ ಬಂಡವಾಳ ಎಷ್ಟು;

ಈ) ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ;

ಉ) ಈ ಉದ್ಯಮಗಳ ಉತ್ಪಾದನಾ ಮೌಲ್ಯ ಎಷ್ಟು;

ಊ) ಈ ಉದ್ಯಮಗಳಿಗೆ ಸರ್ಕಾರ ನೀಡಿರುವ ಸೌಲಭ್ಯಗಳ ಒಟ್ಟು ಮೌಲ್ಯ ಎಷ್ಟು;

ಋ) ಅವುಗಳಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗುವ ಆದಾಯ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲಾದ ಸಣ್ಣ, ಮಧ್ಯಮ ಮತ್ತು ಭಾರಿ ಕೈಗಾರಿಕೆಗಳ ಒಟ್ಟು ಸಂಖ್ಯೆ: 69,294.

ಆ) ಸಣ್ಣ ಕೈಗಾರಿಕೆಗಳ ಸಂಖ್ಯೆ: 69,005.
ಮಧ್ಯಮ ಮತ್ತು ಭಾರಿ ಕೈಗಾರಿಕೆಗಳ ಸಂಖ್ಯೆ: 289.

ಇ) ಸಣ್ಣ ಕೈಗಾರಿಕೆಗಳು – ರೂ. 2295 ಕೋಟಿ.
ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು – ಸಂಖ್ಯೆ: 10,481 ಕೋಟಿ.

ಈ) ಸಣ್ಣ ಕೈಗಾರಿಕೆಗಳ – 3,24,000
ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು – ಸಂಖ್ಯೆ: 1,16,000

ಉ) ಕೈಗಾರಿಕೆಗಳಲ್ಲಿನ ವಾರ್ಷಿಕ ವಾಸ್ತವಿಕ ಉತ್ಪಾದನಾ ಪ್ರಮಾಣ, ಮೌಲ್ಯ ಹಾಗೂ ವಾಹಿವಾಟು ವಿವರಗಳನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿಲ್ಲ.

ಊ) ಈ ಅವಧಿಯಲ್ಲಿ ಸ್ಥಾಪಿಸಲಾದ 20,644 ಸಣ್ಣ ಕೈಗಾರಿಕೆಗಳಿಗೆ ಒಟ್ಟು ರೂ. 492.88 ಕೋಟಿ ಬಂಡವಾಳ ಹೂಡಿಕೆ ಸಹಾಯಧನವನ್ನು ಮಂಜೂರುಮಾಡಲಾಗಿದೆ. ಇವುಗಳ ಪೈಕಿ 11,318 ಘಟಕಗಳಿಗೆ ಭಾಗಶಃ ರೂ.140 ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ರೂ.352.88 ಕೋಟಿಗಳು ಬಾಕಿ ಇದೆ.

ಋ) ವಾಣಿಜ್ಯ ತೆರಿಗೆ ಇಲಾಖೆಯಿಂದ ಒದಗಿಸಲಾದ ಮಾಹಿತಿಯನ್ವಯ ಕೈಗಾರಿಕೆಗಳಿಂದ ವಾಣಿಜ್ಯ ತೆರಿಗೆ ಸಂಗ್ರಹಣೆ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿ)

ವರ್ಷ	ಸಣ್ಣ ಕೈಗಾರಿಕೆಗಳು	ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು	ಒಟ್ಟು
2002–03	304.12	729.58	1033.7
2003–04	396.90	860.77	1257.67
2004–05	490.89	1064.60	1555.49
ಮೊತ್ತ	**1191.91**	**2654.95**	**3846.86**

1645 (2141) ಶ್ರೀ ಶಂಕರಲಿಂಗೇಗೌಡ ಹೆಚ್.ಎನ್ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ವಿರುದ್ಧ ಚಳುವಳಿ: ಮುಷ್ಕರ ಮಾಡಿದ ರಾಜಕೀಯ ನಾಯಕರು ಹಾಗೂ ಚಳುವಳಿಗಾರರ ಮೇಲೆ ಸರ್ಕಾರ ಹೂಡಿರುವ ಮೊಕದ್ದಮೆಗಳ ಪೈಕಿ ಬಾಕಿ ಇರುವ ಮೊಕದ್ದಮೆಗಳು ಯಾವುವು (ಘಟನಾ ವಿವರಗಳನ್ನು ನೀಡುವುದು) ಮೊಕದ್ದಮೆಯನ್ನು ಯಾವ ಯಾವ ಕಾರಣಕ್ಕಾಗಿ ಯಾರ ಯಾರ ಮೇಲೆ ಹೂಡಲಾಗಿದೆ. (ಸಮುದಾಯವಾರು ವಿವರ ನೀಡುವುದು)

ಆ) ಬಾಕಿ ಇರುವ ಸದರಿ ಮೊಕದ್ದಮೆಗಳ ಪೈಕಿ ಯಾವ ಯಾವ ಮೊಕದ್ದಮೆಗಳು ಈಗ ಯಾವ ಹಂತದಲ್ಲಿವೆ.

ಇ) ಈ ರೀತಿ ಬಾಕಿ ಇರುವ ಮೊಕದ್ದಮೆಗಳನ್ನು ಸರ್ಕಾರದ ಸದ್ಯಡ ನಿಲುವೇನು?

ಮಾನ್ಯ ಮುಖ್ಯ ಮಂತ್ರಿಗಳು :

ಅ) ರಾಜ್ಯ ಸರ್ಕಾರದ ವಿರುದ್ಧ ಚಳುವಳೀ: ಮುಷ್ಕರ ಮಾಡಿದ ರಾಜಕೀಯ ನಾಯಕರು ಹಾಗೂ ಚಳುವಳಿಗಾರರ ಮೇಲೆ ಸರ್ಕಾರ ಹೂಡಿರುವ ಮೊಕದ್ದಮೆಗಳ ಪೈಕಿ ಒಟ್ಟು 231 ಮೊಕದ್ದಮೆಗಳು ಬಾಕಿ ಇರುತ್ತವೆ. ಈ ಮೊಕದ್ದಮೆಗಳ ವಿವರಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಪ್ರತಿಯೊಂದು ಮೊಕದ್ದಮೆಯ ಈಗಿನ ಹಂತವನ್ನು ಅನುಬಂಧದಲ್ಲಿ ನಮೂದಿಸಿದೆ.

ಇ) ಆಯಾ ಪ್ರಕರಣಗಳಲ್ಲಿ, ಸಮಂಜಸ ಕಾರಣಗಳು ಇದ್ದಲ್ಲಿ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಪರಿಶೀಲಿಸಲಾಗುವುದು.